# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ
# ಹಗರಿಬೊಮ್ಮನಹಳ್ಳಿ.

ಉಪಸ್ಥಿತರುಃ ಶ್ರೀಮತಿ ಭಾಗ್ಯಲಕ್ಷ್ಮಿ ಬಿ.ಕಾಂ.ಎಲ್.ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಹಗರಿಬೊಮ್ಮನಹಳ್ಳಿ

**ಅಸಲು ದಾವ ಸಂಖ್ಯೆ: 27 /2021**

ದಿನಾಂಕ **19** ನೇ ಜುಲೈ **2021**

**ನಡುವೆ :**

ಶ್ರೀಮತಿ ನೀಲಮ್ಮ ಹಾಗೂ ಇತರರು

...... ವಾದಿಯರು

**ಮತ್ತು :**

ನೀಲಪ್ಪ ಹಾಗೂ ಇತರರು

..... ಪ್ರತಿವಾದಿಯರು

**ಮಧ್ಯಂತರ ಅರ್ಜಿ ಸಂಖ್ಯೆ - I**

**ವಾದಿಯರು:** 1. ಶ್ರೀಮತಿ ನೀಲಮ್ಮ ಕೋಂ ನಿಂಗಪ್ಪ ಗಡಿಯಪ್ಪನವರು @ ಮಣಿಗಾರ @ ಬಲ್ಲಾಳ, ವಯಸ್ಸು 48 ವರ್ಷ ವೃತ್ತಿಃವ್ಯವಸಾಯ ವಾಸಃ ಸೊನ್ನ ಗ್ರಾಮ, ಹಗರಿಬೊಮ್ಮನಹಳ್ಳಿ (ತಾ), ಬಳ್ಳಾರಿ ಜಿಲ್ಲೆ ಮತ್ತು ಇತರರು

...... ವಾದಿಯರು/ಅರ್ಜಿದಾರರು

**(ಪ್ರತಿನಿಧಿಸುವವರುಃ ಶ್ರೀ ಎಲ್.ಡಿ.ಪಿ., ವಕೀಲರು)**

**ಮತ್ತು :**

**ಪ್ರತಿವಾದಿಯರುಃ** 1. ನೀಲಪ್ಪ ತಂದೆ ತಿಂದಪ್ಪ ಗಡಿಯಪ್ಪನವರು @ ಮಣೇಗಾರ @ ಬಲ್ಲಾಳ, ವಯಸ್ಸುಃ21 ವರ್ಷ ಉಃಮನೆಕೆಲಸ, ಹಾಲ ವಾಸಃರಾಮನಗರ ಪಟ್ಟಣ

ವಾಸಿಃಗರಡಿಮನಿ ಹತ್ತಿರ, ಹಗರಿಬೊಮ್ಮನಹಳ್ಳಿ ತಾಲ್ಲೂಕು,
ಬಳ್ಳಾರಿ ಜಿಲ್ಲೆ ಹಾಗೂ ಇತರರು

...... ಪ್ರತಿವಾದಿಯರು/ಎದುರುದಾರರು

**(2 ರಿಂದ 5 ನೇ ಪ್ರತಿವಾದಿಯ ಪರ ಪ್ರತಿನಿಧಿಸುವವರುಃ ಶ್ರೀ ಎ.ಕೆ., ವಕೀಲರು ಹಾಗೂ 6 ನೇ ಪ್ರತಿವಾದಿಯರ ಪರ ಪ್ರತಿನಿಧಿಸುವವರುಃ ಶ್ರೀ ಡಿ.ಎಂ.,ವಕೀಲರು)**

**ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಮತ್ತು ಸಹಕಲಂಃ151 ರಡಿಯಲ್ಲಿ ವಾದಿಗಳು ಸಲ್ಲಿಸಿದ ಅರ್ಜಿಯ ಸಂಖ್ಯೆ1 ರ ಮೇಲಿನ ಆದೇಶ:**

ವಾದಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ.1 ನ್ನು ಸಲ್ಲಿಸಿ, ಪ್ರತಿವಾದಿಯರು 'ಬ' ಷೆಡ್ಯೂಲ್ ಆಸ್ತಿಗಳನ್ನು ಬೇರೆ ಯಾರಿಗೂ ಮಾರಾಟ, ಲಾವಣಿ, ಮಾಡದಂತೆ, ದಾವೆಯು ಅಂತಿಮವಾಗಿ ತೀರ್ಮಾನವಾಗುವವರೆಗೂ ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೇಳಿ ಸಲ್ಲಿಸಿರುತ್ತಾರೆ.

2. 1 ನೇ ಪ್ರತಿವಾದಿಯು ಮೃತಪಟ್ಟಿರುತ್ತಾರೆ. ಅರ್ಜಿಯ ನಕಲು ಪ್ರತಿ 2 ರಿಂದ 6 ನೇ ಪ್ರತಿವಾದಿಗಳಿಗೆ ತಲುಪಿದ ನಂತರ 2 ರಿಂದ 5 ನೇ ಪ್ರತಿವಾಗಳ ಪರ ವಕೀಲರಾದ ಶ್ರೀ ಅಶೋಕ ಕನಕೇರಿ ವಕೀಲರು ದಾವಾ 'ಬ' ಷೆಡ್ಯೂಲ್ ಆಸ್ತಿಗಳನ್ನು 2 ರಿಂದ 5 ನೇ ಪ್ರತಿವಾದಿಗಳು ಮೂರನೇ ವ್ಯಕ್ತಿಗಳಿಗೆ ಮಾರಾಟ ಮಾಡುವುದಿಲ್ಲವೆಂದು ಲಿಖಿತವಾಗಿ ಮೇಮೋ ಸಲ್ಲಿಸಿರುತ್ತಾರೆ.

6 ನೇ ಪ್ರತಿವಾದಿ ಪರ ವಕೀಲರು ಮೇಮೋ ಸಲ್ಲಿಸಿ ಪ್ರತಿವಾದ ಪತ್ರದಲ್ಲಿ ಬರೆದ ವಿಷಯಗಳನ್ನು 6 ನೇ ಪ್ರತಿವಾದಿಯ ಪರವಾಗಿ ವಾದಿಯ ಮಧ್ಯಂತರ ಅರ್ಜಿಗೆ ತಕರಾರೆಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ವಾದಪತ್ರದಲ್ಲಿಯ

ಎಲ್ಲಾ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ವಾದಿಗಳು ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ತಿರಿಸ್ಕರಿಸಬೇಕೆಂದು 6 ನೇ ಪ್ರತಿವಾದಿಯು ಕೋರಿರುತ್ತಾರೆ.

3. ವಾದಿಗಳು ಮತ್ತು ಪ್ರತಿವಾದಿಗಳ ಪರ ವಕೀಲರ ವಾದವನ್ನು ಅಲಿಸಲಾಯಿತು, ಕಡತವನ್ನು ಪರಿಶೀಲಿಸಲಾಯಿತು.

4. ನನ್ನ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಭವವಾಗಿರುತ್ತವೆ.

***1) Whether the plaintiffs prove prima-facie case in their favour?***

***2) Whether the plaintiffs prove the balance of convenience lies in in thier favour?***

***3) Whether the plaintiffs would suffer irreparable loss and injury if the prayer of interim injunction is not allowed?***

***4) What order?***

5. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ

***ಅಂಶ-1 : ಸಕಾರಾತ್ಮಕವಾಗಿ***
***ಅಂಶ-2 : ಸಕಾರಾತ್ಮಕವಾಗಿ***
***ಅಂಶ-3 : ಸಕಾರಾತ್ಮಕವಾಗಿ***
***ಅಂಶ-4 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಾಗಿ***

## ಕಾರಣಗಳು

6. **ಅಂಶ-1:-** ವಾದಿಗಳು ಸದರಿ ದಾವೆಯನ್ನು ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ.

7. ವಾದಿಗಳ ಪ್ರಕಾರ, ಪ್ರತಿವಾದಿಗಳು ಸಹೋದರ ಹಾಗೂ ಸಹೋದರಿಯರಾಗಿದ್ದು, ದಾವಾ ಷೆಡ್ಯೂಲ್ 'ಬ' ಆಸ್ತಿಗಳು ಮೂಲತಃ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳಾಗಿರುತ್ತವೆ. ತಿಂದಪ್ಪ ಮತ್ತು ಮತ್ತು ಆತನ ಹೆಂಡತಿಯಾದ ಅಂಬಮ್ಮ ಇವರಿಗೆ ಎರಡು ಗಂಡು ಹಾಗೂ 5 ಹೆಣ್ಣು ಮಕ್ಕಳು ಜನಿಸಿರುತ್ತಾರೆ. ಸದರಿಯವರಲ್ಲಿ ತಿಂದಪ್ಪ, ಅಂಬಮ್ಮ, ಮಲ್ಲಪ್ಪ, ಗಂಗಮ್ಮ ಮತ್ತು ಶಿವಗಂಗಮ್ಮ ಮೃತಪಟ್ಟಿರುತ್ತಾರೆ. ಮಲ್ಲಪ್ಪ ಮತ್ತು ತಾಯಮ್ಮ ಇವರ ವೈವಾಹಿಕ ಜೀವನದಿಂದಾಗಿ ನಿಂಗಪ್ಪ, ಬಸಪ್ಪ, ವೆಂಕಟೇಶ ಹಾಗೂ 2 ರಿಂದ 5 ನೇ ವಾದಿಗಳು ಹಾಗೂ ನಿಂಗಪ್ಪ ಎಂಬ ಮಕ್ಕಳು ಜನಿಸಿದ್ದು, ಸದರಿಯವರನ್ನು ಹೊರತುಪಡಿಸಿ ಮಲ್ಲಪ್ಪನ ಕಾನೂನುಬದ್ಧ ವಾರಸುದಾರರು ಬೇರೆ ಯಾರು ಇರುವುದಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಪಾಲು ವಿಭಾಗವಾಗಿರುವುದಿಲ್ಲ. ಸದರಿ ದಾವಾ 'ಬ' ಷೆಡ್ಯೂಲ್ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು, ವಾದಿಗಳು ಕೂಡ ಸದರಿ ದಾವಾ 'ಬ' ಷೆಡ್ಯೂಲ್ ಆಸ್ತಿಗಳಲ್ಲಿ ಪಾಲನ್ನು ಹೊಂದಿರುವುದರಿಂದ ಹಾಗೂ ದಾವಾ 'ಬ' ಷೆಡ್ಯೂಲ್ ಆಸ್ತಿಗಳು ಪ್ರತಿವಾದಿಯರ ಹೆಸರಿನಲ್ಲಿ ಮುಟೇಶನ್ ಆಗಿರುವ ಕಾರಣ ಒಂದು ವೇಳೆ ದಾವಾ ವಿಚಾರಣಾ ಹಂತದಲ್ಲಿ ಪ್ರತಿವಾದಿಗಳು ದಾವಾ 'ಬ' ಷೆಡ್ಯೂಲ್ ಆಸ್ತಿಗಳನ್ನು ಮಾರಾಟ ಮಾಡಿದಲ್ಲಿ ವಾದಿಯರಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆ. ಕಾರಣ ದಾವೆಯು ಅಂತಿಮವಾಗಿ ತೀರ್ಮಾನವಾಗುವವರೆಗೂ ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿರುತ್ತಾರೆ.

8. 6 ನೇ ಪ್ರತಿವಾದಿಯು ತನ್ನ ಪ್ರತಿವಾದಪತ್ರವನ್ನೇ ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ತಕರಾರು ಎಂದು ಹೇಳಿದ್ದು, ಸದರಿ ಪ್ರತಿವಾದಪತ್ರದಲ್ಲಿ ಶ್ರೀಮತಿ ಶ್ಯಾವಿ ಬಸಮ್ಮ ಕೋಂ ದಿಃ ಗವಿಸಿದ್ದಪ್ಪ ಇವರು , ಜಿ.ನೀಲಪ್ಪ ಬಿನ್ ತಿಂದಪ್ಪ ಇವರಿಂದ ಕಡಲಬಾಳು ಗ್ರಾಮದ ಸರ್ವೆ ನಂ.542 ಎ/3, 5 ಎಕರೆ 59 ಸೆಂಟ್ಸ ಪೈಕಿ 1 ಎಕರೆ 15 ಸೆಂಟ್ಸ ಜಮೀನನ್ನು ದಿನಾಂಕಃ23.07.2007 ರಂದು ರೂ.25,000/- ಗಳ ಪ್ರತಿಫಲಕ್ಕೆ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದು 1 ಎಕರೆ 15 ಸೆಂಟ್ಸ ಜಮೀನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ.

9. ಮುಂದುವರೆದು 6 ನೇ ಪ್ರತಿವಾದಿಯಾದ ಶ್ರೀ ಹುಳ್ಳಿ ಮಂಜುನಾಥ ಬಿನ್ ದುರುಗಮ್ಮ ಇವರು ಶ್ರೀಮತಿ ಶ್ಯಾವಿ ಬಸಮ್ಮ ಕೋಂ ದಿ|| ಗವಿಸಿದ್ದಪ್ಪ ಇವರಿಂದ ಕಡಲುಬಾಳು ಗ್ರಾಮದ ಸರ್ವೆನಂ.542 ಎ/3, 5 ಎಕರೆ 59 ಸೆಂಟ್ಸ ಪೈಕಿ 1 ಎಕರೆ 15 ಸೆಂಟ್ಸ ಜಮೀನನ್ನು ದಿನಾಂಕಃ29.07.2010 ರಂದು ರೂ.38,000/- ಗಳ ಪ್ರತಿಫಲಕ್ಕೆ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದು, ಅಂದಿನಿಂದ 1 ಎಕರೆ 15 ಸೆಂಟ್ಸ ಜಮೀನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಹಾಗೂ 6 ನೇ ಪ್ರತಿವಾದಿಯು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ದಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ. ಕಾರಣ ಒಂದು ವೇಳೆ ವಾದಿಗಳ ಪರವಾಗಿ ದಾವಾ 'ಬ' ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಾವೆಯು ಅಂತಿಮವಾಗಿ ತೀರ್ಮಾನವಾಗುವವರೆಗೂ ತಾತ್ಕಾಲಿಕ ನಿರ್ಭಂಧಕಾಜ್ಞೆ ಪರಿಹಾರವನ್ನು ಕೊಟ್ಟಲ್ಲಿ 6 ನೇ ಪ್ರತಿವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ

ಕಾರಣ ವಾದಿಗಳ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

10. **ವಾದಿಗಳು ಅವರ ಅರ್ಜಿಯ ಪುಷ್ಟೀಕರಣಕ್ಕಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ.**

1) ಸರ್ವೆ ನಂ.542/ಎ/3/ಎ ನೆದ್ದರ ಪಹಣಿ ಪತ್ರಿಕೆ ಮತ್ತು ಡೈಟ್‌ಲೇಟ್
2) ಸರ್ವೆ ನಂ.542/ಎ/3/ಬಿ/1 ನೇದ್ದರ ಪಹಣಿ ಪತ್ರಿಕೆ
3) ಸರ್ವೆ ನಂ.542/ಎ/3/ಬಿ/2 ನೇದ್ದರ ಪಹಣಿ ಪತ್ರಿಕೆ
4) ಸರ್ವೆ ನಂ.542/ಎ/4 ನೇದ್ದರ ಪಹಣಿ ಪತ್ರಿಕೆ
5) ಸರ್ವೆ ನಂ.542/ಬಿ/2 ನೇದ್ದರ ಪಹಣಿ ಪತ್ರಿಕೆ
6) ಸರ್ವೆ ನಂ.542/* ನೇದ್ದರ ಪಹಣಿ ಪತ್ರಿಕೆ
7) ಸರ್ವೆ ನಂ.548/ಬಿ/1 ನೇದ್ದರ ಪಹಣಿ ಪತ್ರಿಕೆ
8) ಸರ್ವೆ ನಂ.548/ಬಿ/5 ನೇದ್ದರ ಪಹಣಿ ಪತ್ರಿಕೆ
9) ದಿಃ04.09.2020 ರಂದು ವಕೀಲರ ಮೂಲಕ ನೀಡಿದ ನೋಟಿಸ್
9) ಎರಡು ಅಂಚೆ ಸ್ವೀಕೃತಿಗಳು
10) ದಿಃ21.09.2020 ರಂದು ನೀಡಿದ ಉತ್ತರ ನೋಟಿಸಿನ ಮೂಲಕ ಪ್ರತಿ

ಸದರಿ ಮೇಲ್ಕಂಡ ಮಧ್ಯಂತರ ಅರ್ಜಿಯ ಬಗ್ಗೆ ಚರ್ಚಿಸುವ ಮೊದಲು ನ್ಯಾಯಾಲಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುವುದು ಸೂಕ್ತವೆಂದು ಭಾವಿಸುತ್ತದೆ.

It is well settled principle of law that for grant of temporary injunction three factors have to be satisfied which are prima-facie case, balance of convenience and irreparable loss. In **Dalpat Kumar V/s. Pralhad**

**Singh reported in AIR 1993 SC 276** ***the Hon'ble Apex Court explained these factors as follows:***

***i) There is a serious disputed question to be tried in the Court and that an act, on the facts before the Court, there is probability of his being entitled to the relief asked for by the plaintiff/defendant.***

***ii) The Court's interference is necessary to protect the party from the species of injury. In other words irreparable injury or danger would ensue before the legal right would bee established at trial and***

***iii) That the comparative hardship or mischief or inconvenience which is likely to offer from withholding the injunction will be greater than that would be likely to acted from granting it.***

ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ವಾದಿಗಳು ಈ ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸುತ್ತಾರೆಯೇ ಎಂಬುದನ್ನು ನೋಡಬೇಕಾಗಿರುತ್ತದೆ.

11. ವಾದಿಗಳ ಪ್ರಕಾರ, ಕಡಲುಬಾಳು ಗ್ರಾಮದಲ್ಲಿರುವ ದಾವಾ '**ಬ**' ಷೆಡ್ಯೂಲ್ ಆಸ್ತಿಗಳು

***I) ಸರ್ವೆ ನಂ.542/ಎ/3/ಎ ರ ಒಟ್ಟು 1 ಎಕರೆ 15 ಸೆಂಟ್ಸ***

***ii) ಸರ್ವೆ ನಂ.542/ಎ/3/ಬಿ/1 ರ ಒಟ್ಟು 1 ಎಕರೆ 20 ಸೆಂಟ್ಸ***

***iii) ಸರ್ವೆ ನಂ.542/ಎ/3/ಬಿ/2 ರ ಒಟ್ಟು 3 ಎಕರೆ 24 ಸೆಂಟ್ಸ***

***iv) ಸರ್ವೆ ನಂ.542/ಎ/4 ರ ಒಟ್ಟು 33 ಸೆಂಟ್ಸ.***

***v) ಸರ್ವೆ ನಂ.542/ಬಿ/2 ರ ಒಟ್ಟು ವಿಸ್ತೀರ್ಣ 2 ಎಕರೆ 83 ಸೆಂಟ್ಸ***

***vi) ಸರ್ವೆ ನಂ.548/* ರ ಒಟ್ಟು ವಿಸ್ತೀರ್ಣ 6 ಎಕರೆ 39 ಸೆಂಟ್ಸ***

***vii) ಸರ್ವೆ ನಂ.548/ಬಿ/1 ರ ಒಟ್ಟು ವಿಸ್ತೀರ್ಣ 2 ಎಕರೆ 82 ಸೆಂಟ್ಸ***

***viii) ಸರ್ವೆ ನಂ.548/ಬಿ/5 ರ ಒಟ್ಟು ವಿಸ್ತೀರ್ಣ 2 ಎಕರೆ 74 ಸೆಂಟ್ಸ*** ಆಸ್ತಿಗಳಾಗಿದ್ದು,

12. ವಾದಿಗಳ ಪ್ರಕಾರ ದಾವಾ 'ಬ' ಷೆಡ್ಯೂಲ್ ಆಸ್ತಿಗಳು ವಾದಿಗಳು ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಸದರಿ ಪ್ರಕರಣದಲ್ಲಿ 2 ರಿಂದ 5 ನೇ ಪ್ರತಿವಾದಿಯರ ಪರ ವಕೀಲರು ಮೇಮೋ ಸಲ್ಲಿಸಿ ದಾವಾ ಬ ಆಸ್ತಿಗಳನ್ನು ದಾವೆ ಅಂತಿಮವಾಗಿ ತೀರ್ಮಾನವಾಗುವವರೆಗೂ 3 ನೇ ವ್ಯಕ್ತಿಗೆ ಮಾರಾಟ ಮಾಡುವುದಿಲ್ಲವೆಂದು ಲಿಖಿತವಾಗಿ ಮೆಮೋ ಸಲ್ಲಿಸಿರುತ್ತಾರೆ. ಸದರಿಯವರ ಮೆಮೋ ಪ್ರಕಾರವಾಗಿ 2 ರಿಂದ 5 ನೇ ಪ್ರತಿವಾದಿಗಳು ಮತ್ತು ವಾದಿಗಳು ಸದರಿ ದಾವಾ ಆಸ್ತಿಗಳಿಗೆ ಕಾನೂನುಬದ್ದ ವಾರಸುದಾರರಾಗಿರುತ್ತಾರೆ ಎಂಬ ಸಂಗತಿಯನ್ನು ಹಾಗೂ ದಾವಾ 'ಬ' ಆಸ್ತಿಗಳು ವಾದಿಗಳು ಹೇಳುವಂತೆ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂಬ ಅಂಶವನ್ನು ಪರೋಕ್ಷವಾಗಿ ಒಪ್ಪಿಕೊಂಡಿರುವುದು ಮೇಲ್ನೋಟಕ್ಕೆ ರುಜುವಾತಾಗುತ್ತದೆ. ಕಾರಣ 2 ರಿಂದ 5 ನೇ ಪ್ರತಿವಾದಿಗಳಿಗೆ

ಸಂಬಂಧಿಸಿದಂತೆ ವಾದಿಗಳ ಪರವಾಗಿ ದಾವೆಯು ಅಂತಿಮವಾಗಿ ತೀರ್ಮಾನವಾಗುವವರೆಗೂ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡುವ ಬಗ್ಗೆ ಹೆಚ್ಚಿನ ಚರ್ಚೆಯ ಅವಶ್ಯಕತೆ ಇರುವುದಿಲ್ಲ.

13. 6 ನೇ ಪ್ರತಿವಾದಿಯು ದಾವಾ 'ಬ ಷೆಡ್ಯೂಲ್ 1 ನೇ ಕ್ರಮ ಸಂಖ್ಯೆಯ ಸರ್ವೆ ಸಂಖ್ಯೆ 542/ಎ/3 ಒಟ್ಟು 5 ಎಕರೆ 59 ಸೆಂಟ್ಸ ಸ್ವತ್ತಿನ ಪೈಕಿ 1 ಎಕರೆ 15 ಸೆಂಟ್ಸ ಸ್ವತ್ತನ್ನು ಖರೀದಿ ಮಾಡಿರುವುದಾಗಿ ಹೇಳಿರುತ್ತಾರೆ. ಆದರೆ ಈ ಒಂದು ಹಂತದಲ್ಲಿ ಸದರಿ ಸ್ವತ್ತು ದಾವಾ ಸ್ವತ್ತಿನಲ್ಲಿ ಸೇರಿದಂತ ಸ್ವತ್ತಾಗಿದ್ದು ದಾವಾ ವಿಚಾರಣಾ ಹಂತದಲ್ಲಿ ಮಾತ್ರ 6 ನೇ ಪ್ರತಿವಾದಿಯು ಖರೀದಿಸಿದಂತ ಆಸ್ತಿಯು ಯಾರ ಹಿಸ್ಸೆಗೆ ಹೋಗುತ್ತದೆ, ವಾದಿಗಳು ಮತ್ತು ಪ್ರತಿವಾದಿಗಳು ಸದರಿ ದಾವಾ 'ಬ' ಷೆಡ್ಯೂಲ್ ಆಸ್ತಿಗಳಿಗೆ ಹಕ್ಕು ಹಿತಾಸಕ್ತಿಯನ್ನು ಹೊಂದಿರುತ್ತಾರೆಯೇ ಹಾಗೂ ದಾವಾ 'ಬ' ಷೆಡ್ಯೂಲ್ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆಯೋ ಎಂಬುದು ತೀರ್ಮಾನಿಸಬೇಕಾದಂತಹ ಸಂಗತಿಯಾಗಿದ್ದು, ಮೇಲ್ನೋಟಕ್ಕೆ ವಾದಿಗಳು ದಾವಾ 'ಬ' ಷೆಡ್ಯೂಲ್ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆಂದು ರುಜುವಾತುಪಡಿಸಿರುವುದರಿಂದ ***ಅಂಶ-1 ನ್ನು ನ್ಯಾಯಾಲಯವು ಸಕಾರಾತ್ಮಕವಾಗಿ ಉತ್ತರಿಸಿರುತ್ತದೆ.***

**14. ಅಂಶ-2 ಃ** ವಾದಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿರುವಂತಹ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಹಾಗೂ 2 ರಿಂದ 5 ನೇ ಪ್ರತಿವಾದಿಯರು ದಾವಾ 'ಬ' ಷೆಡ್ಯೂಲ್ ಆಸ್ತಿಗಳನ್ನು ಬೇರೆಯವರಿಗೆ ದಾವೆ ಅಂತಿಮವಾಗಿ ತೀರ್ಮಾನವಾಗುವವರೆಗೂ ಮಾರಾಟ ಮಾಡುವುದಿಲ್ಲವೆಂದು ಲಿಖಿತವಾಗಿ ಮೆಮೋವನ್ನು ಸಲ್ಲಿಸಿರುವ ಕಾರಣ ಹಾಗೂ 6 ನೇ ಪ್ರತಿವಾದಿಯು

ಆತನು ಖರೀದಿಸಿದಂತಹ ದಾವಾ 'ಬ' ಷೆಡ್ಯೂಲ್ 1 ನೇ ಆಸ್ತಿಯ ಮೇಲಿನ ಆತನ ಸ್ವಾಧೀನತೆಗೆ ಯಾವುದೇ ಅಡ್ಡಿ ಆತಂಕ ಉಂಟಾಗದಿರುವುದರಿಂದ ಅನುಕೂಲತೆಯ ಒಲವು ಪ್ರತಿವಾದಿಗಳಿಗಿಂತ ವಾದಿಗಳ ಪರವೇ ಹೆಚ್ಚಾಗಿರುವುದರಿಂದ **ಅಂಶ-2 ನ್ನು ನ್ಯಾಯಾಲಯವು ಸಕಾರಾತ್ಮಕವಾಗಿ ಉತ್ತರಿಸಿರುತ್ತದೆ.**

15. **ಅಂಶ-3 ಃ** ವಾದಿಗಳ ಪರವಾಗಿ ದಾವೆಯು ಅಂತಿಮವಾಗಿ ತೀರ್ಮಾನವಾಗುವವರೆಗೂ ದಾವಾಸ್ತಿಯನ್ನು ಮಾರಾಟ ಮಾಡುವುದಿಲ್ಲವೆಂದು 2 ರಿಂದ 5 ನೇ ಪ್ರತಿವಾದಿಗಳು ಮೆಮೋ ಸಲ್ಲಿಸುವುದರ ಮೂಲಕ ಒಪ್ಪಿಕೊಂಡಿದ್ದು, ಮೇಲಾಗಿ 6 ನೇ ಪ್ರತಿವಾದಿಯು ಈಗಾಗಲೇ ಖರೀದಿಸಿದಂತಹ ದಾವಾ 'ಬ' ಷೆಡ್ಯೂಲ್ 1 ನೇ ಆಸ್ತಿಯಲ್ಲಿ ಆತನ ಸ್ವಾಧೀನತೆಗೆ ಯಾವುದೇ ಧಕ್ಕೆಯು ಹಾಗೂ ಅಡ್ಡಿ ಆತಂಕವು ಉಂಟಾಗದೇ ಇರುವುದರಿಂದ, ಒಂದು ವೇಳೆ ದಾವೆಯ ವಿಚಾರಣಾ ಹಂತದಲ್ಲಿ ದಾವಾ 'ಬ' ಷೆಡ್ಯೂಲ್ ಆಸ್ತಿಗಳನ್ನು ಪ್ರತಿವಾದಿಗಳು ಬೇರೊಬ್ಬರಿಗೆ ಮಾರಾಟ ಮಾಡಿದರೆ ವಾದಿಗಳಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಹಾಗೂ ಆ ನಷ್ಟವನ್ನು ಹಣದಿಂದ ಭರಿಸಲು ಸಾಧ್ಯವಿಲ್ಲ. ಮುಂದುವರೆದು ಒಂದು ವೇಳೆ ಈ ಒಂದು ಹಂತದಲ್ಲಿ ವಾದಿಗಳ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ದಾವಾ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಕರಣಗಳು ಉದ್ಭವವಾಗುವ ಸಂಭವವಿರುತ್ತದೆ. ಕಾರಣ ***ಅಂಶ-3 ನ್ಯಾಯಾಲಯವು ಸಕಾರಾತ್ಮಕವಾಗಿ ಉತ್ತರಿಸಿರುತ್ತದೆ.***

16. **ಅಂಶ-4:** ಈ ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ.

# : ಆದೇಶ :

ವಾದಿಯು ಸಲ್ಲಿಸಿರುವಂತಹ ಕ್ರಮಾದೇಶ 39 ನಿಯಮ-1 ಮತ್ತು 2 ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು 2 ರಿಂದ 6 ನೇ ಪ್ರತಿವಾದಿಗಳ ವಿರುದ್ದವಾಗಿ ಪುರಸ್ಕರಿಸಲಾಗಿರುತ್ತದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಅವರು ಅದನ್ನು ಬೆರಳಚ್ಚು ಮಾಡಿದ್ದು, ತದನಂತರ ನಾನು ಸರಿಪಡಿಸಿ, ಸಹಿ ಮಾಡಿದ ನಂತರ ಅದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 19 ನೇ ಜುಲೈ 2022 ರಂದು ಉಚ್ಚರಿಸಲಾಗಿರುತ್ತದೆ)

(ಶ್ರೀಮತಿ ಭಾಗ್ಯಲಕ್ಷ್ಮಿ)
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹಗರಿಬೊಮ್ಮನಹಳ್ಳಿ.